ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
ಊಟಿರಸ್ತೆ, ಮೈಸೂರು-570 025, ಕರ್ನಾಟಕ

0821-2548236 & 2548380 Fax: 0821-2548238 E-mail: jssautonomous@gmail.com

ಪ್ರಕಟಣೆಯ ಕೃಪೆಗಾಗಿ ದಿನಾಂಕ : 01.11.2016

## ಸಜೀವ ಅಸ್ತಿತ್ವದ ಸಂಕೇತ ಕನ್ನಡ ನುಡಿ

– ಡಾ. ಕವಿತಾ ರೈ

ಮೈಸೂರು ನವೆಂಬರ್ ೦೧, ನಗರದ ಬಿ.ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಕ್ಕಮಹಾದೇವಿ ಅಧ್ಯಯನ ಮತ್ತು ಸಂಶೋಧನಾ ಪೀಠದ ನಿರ್ದೇಶಕರಾದ ಡಾ. ಕವಿತ ರೈ ಅವರು ಮುಖ್ಯ ಅತಿಥಿಗಳ ಭಾಷಣವನ್ನು ಮಾಡುತ್ತಾ "ನಮ್ಮ ತಾಯಿಯನ್ನು ತಾಯಿ ಎಂದು ಕರೆದುಕೊಳ್ಳುವುದರಲ್ಲಿ ಹೇಗೆ ಮುಜುಗರ ಇರಬಾರದೋ ಹಾಗೆಯೇ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ನಮ್ಮ ಮಾತೃಭಾಷೆ ಎಂದು ಹೇಳಿಕೊಳ್ಳುವುದರಲ್ಲಿ ಮುಜುಗರ ಇರಬಾರದು. ಕನ್ನಡ ರಾಜ್ಯೋತ್ಸವವನ್ನು ನಾವುಗಳು ಯಾರ ಒತ್ತಾಯಕ್ಕೊ ಅಥವಾ ಯಾರದೋ ಆಜ್ಞೆಗೆ ನಡೆಸುವಂತಹದಲ್ಲ. ಕನ್ನಡ ನುಡಿಗೆ ಇರುವ ಪರಂಪರೆ ಮತ್ತು ಶಕ್ತಿಯನ್ನು ನೋಡಿದರೆ ಪ್ರತಿಯೊಬ್ಬರಿಗೂ 'ಕನ್ನಡ ನುಡಿ ಸಜೀವ ಅಸ್ತಿತ್ವದ ಸಂಕೇತವಾಗಿದೆ' ಎಂಬುದು ಅರಿವಾಗುತ್ತದೆ. ತಾಯಿ ಭಾಷೆಯಲ್ಲಿ ಕಲಿತು ಮಗು ಶ್ರೇಷ್ಠ ಸಂಸ್ಕೃತಿಯನ್ನು ಆನ್ವಯಿಸಿಕೊಂಡು, ಉತ್ತಮ ಕಲ್ಪನೆಯೊಂದಿಗೆ ಬೆಳೆಯುತ್ತದೆ. ಹಾಗೆ ಬೆಳೆಸುವ ಮತ್ತು ಪೋಷಿಸುವ ಶಕ್ತಿ ನಮ್ಮ ಮಾತೃಭಾಷೆಯಾದ ಕನ್ನಡಕ್ಕೆ ಇದೆ" ಎಂದರು. ಮುಂದುವರೆದು "ಕನ್ನಡ ಭಾಷೆ ಇಂದು ಶ್ರೀಮಂತವಾಗಿ ಬೆಳೆಯುತ್ತಿದ್ದು ಕನ್ನಡ ನಾಡು ಸಂಸ್ಕೃತಿಯನ್ನು ಶ್ರೀಮಂತವಾಗಿ ಬೆಳೆಸುತ್ತಿದೆ. ಇದಕ್ಕೆ ಕರ್ನಾಟಕದ ಭಾಷಾಭೂಗೋಳದ ಒಳಗೆ ಕನ್ನಡ ಭಾಷೆಗೆ ಇರುವ ಭಾಷಾ ಪ್ರಭೇದಗಳೆ ಸಾಕ್ಷಿ. ಇಷ್ಟು ಭಾಷಾಪ್ರಭೇದಗಳ ನಡುವೆಯೆ ಕನ್ನಡ ಭಾಷೆ ಹಿಂದಿನಿಂದಲೂ ವಸಹತುಶಾಹಿಯ ಅನುಭವಕ್ಕೆ ತೆರೆದುಕೊಂಡು ಬಂದಿರುವುದು ವಿಶೇಷವಾಗಿದೆ. ಇಂಗ್ಲಿಷ್ ಭಾಷೆಗೆ ಯಾವುದೇ ಶ್ರೇಷ್ಠ ಯೋಗ್ಯತೆ ಇಲ್ಲ. ಅದು ತನ್ನ ಸಂಸ್ಕೃತಿ ಕೆಲವು ಅಭಿರುಚಿಗಳನ್ನು ಕಲ್ಪಿಸಿಕೊಡುವ ಮುಖಾಂತರ ಮಾತ್ರ ಗೆಲುವು ಪಡೆಯಿತು" ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ "ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿ ಅನನ್ಯವಾದದ್ದು. ಇದು ಒಂದು ಕಾಲದಲ್ಲಿ ಇಡೀ ಭಾರತದಾದ್ಯಂತ ಹಬ್ಬಿತ್ತು. ಪ್ರತಿಯೊಂದು ಕಾಲಘಟ್ಟದಲ್ಲಿಯೂ ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ವಿಭಿನ್ನವಾಗಿ ಕಟ್ಟಿಬೆಳೆಸುವ ಕಾರ್ಯಗಳು ನಿರಂತವಾಗಿ ನಡೆದುಕೊಂಡು ಬಂದಿವೆ. ಇಂದೂ ನಮ್ಮಲ್ಲಿ ಕನ್ನಡ ಪ್ರಜ್ಞೆ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬ ಕನ್ನಡಿಗನು ಇದನ್ನು ಅರಿತು ಜಾಗೃತಗೊಳ್ಳಬೇಕು. ಆ ಮೂಲಕ ಕನ್ನಡಕ್ಕಾಗಿ ಶ್ರಮಿಸಿದ ಮಹನೀಯರಿಗೆ ಗೌರವ ಅರ್ಪಿಸಿ ಕನ್ನಡವನ್ನು ಮತ್ತಷ್ಟು ಉನ್ನತ ಸ್ತರಕ್ಕೆ ಕೊಂಡೊಯ್ಯಬೇಕು" ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳ 'ವಿಚಾರದೀಪ್ತಿ' ಮತ್ತು 'ಭಾವತರಂಗ' ಎಂಬ ಭಿತ್ತಿಪತ್ರಿಕೆ ಮತ್ತು ಕೈಬರಹಗಳನ್ನು ಬಿಡುಗಡೆ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ. ಮಹದೇವಪ್ಪನವರು ಎಲ್ಲರನ್ನು ಸ್ವಾಗತ ಕೋರಿದರು. ಡಾ. ಬಿ. ಪ್ರಭುಸ್ವಾಮಿ ಕಾರ್ಯಕ್ರಮವನ್ನು ನಿರೂಪಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ ಅವರು ವಂದಿಸಿದರು. ಕು. ವಿದ್ಯಾ ಅವರು ಪ್ರಾರ್ಥನೆ ಮಾಡಿದರು.

(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು

ಗೆ,
ಸಂಪಾದಕರು
-------------------
-------------------